# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 | No:32 | ENGLISH DAILY | Subscription Yearly - Rs. - | MONDAY | 23-8-2021



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಕಚ್ಚಾ ಸೋಯ, ರಿಫೈಂಡ್ ಸೋಯ ಎಣ್ಣೆ, ಸೂರ್ಯಕಾಂತಿ ಎಣ್ಣೆಗಳ ಆಮದು ಕರ ಕಡಿತ

ಭಾರತ ಕಚ್ಚಾ ಸೋಯ, ರಿಫೈಂಡ್ ಸೋಯ ಎಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆಗಳ ಮೂಲ ಆಮದು ಕರ 15 ಶೇಕಡಾದಿಂದ 7.5 ಶೇಕಡಾ ಕ್ಕೆ ಕಡಿತಗೊಳಿಸಿದೆಯೆನ್ನಲಾಗಿದೆ. ಆಗಸ್ಟ್ 1–20 ರ ಅವಧಿಯಲ್ಲಿ ಮಲೇಶ್ಯಾ ದ ಪಾಮೆಣ್ಣೆ ರಫ್ತು ಹಿಂದಿನ ತಿಂಗಳ ಈ ಅವಧಿಗಿಂತ 11.5 ಶೇಕಡಾ ಇಳಿಕೆಯಾಗಿದೆಯೆಂದು ಕಾರ್ಗೋ ಸರ್ವೇಯರ್ ಇಂಟರ್‌ಟೆಕ್ ಹೇಳಿದೆಯೆನ್ನಲಾಗಿದೆ.

## ಬೇಡಿಕೆ ಹೆಚ್ಚಳದಿಂದ ಸಕ್ಕರೆ ದರ ಹೆಚ್ಚಳ

ದೇಶದಾದ್ಯಂತ ಸಕ್ಕರೆ ಬೇಡಿಕೆ ಉತ್ತಮಗೊಂಡಿದ್ದು ದರ ಕ್ವಿಂ. ಗೆ ರೂ. 400–500 ಹೆಚ್ಚಳಗೊಂಡಿದೆ. ಹಬ್ಬದ ಬೇಡಿಕೆ ಹೆಚ್ಚಳ ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತದ ಸಕ್ಕರೆಗೆ ಬೇಡಿಕೆ ಹೆಚ್ಚಳವಾಗಿರುವುದರಿಂದ ಸಕ್ಕರೆ ದರ ಏರಿಕೆಯಾಗುತ್ತಿದೆಯೆನ್ನಲಾಗಿದೆ. ಆಗಸ್ಟ್ ತಿಂಗಳ ಸಕ್ಕರೆ ಬಿಡುಗಡೆ ಕೋಟಾ ಜುಲೈ ನಲ್ಲಿದ್ದ 22 ಲಕ್ಷ ಟನ್ ಗಳಿಂದ 21 ಲಕ್ಷ ಟನ್ ಗಳಿಗೆ ಇಳಿಕೆಯಾಗಿದೆ. ಪ್ರತಿವರ್ಷ ಆಗಸ್ಟ್, ಸಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಲ್ಲಿ ದೇಶಿ ಮಾರುಕಟ್ಟೆಯಲ್ಲಿ ಸಕ್ಕರೆ ಬಳಕೆ ಹೆಚ್ಚಳವಿರುತ್ತಿದೆಯೆನ್ನಲಾಗಿದೆ.

## ಹಲವು ರಾಜ್ಯಗಳಲ್ಲಿ ಭತ್ತ (ಅಕ್ಕಿ) ಉತ್ಪಾದನೆ ಇಳಿಕೆಯಾಗುವ ಸಾಧ್ಯತೆ

ಹವಾಮಾನ ಬದಲಾವಣೆ ತಾಪಮಾನ ಹೆಚ್ಚಳದಿಂದ ಕೆಲವು ರಾಜ್ಯಗಳಲ್ಲಿ ಭತ್ತ ಉತ್ಪಾದನೆ ಪ್ರಮಾಣ 2030–2040 ಅವಧಿಯಲ್ಲಿ ಗಣನೀಯ ಇಳಿಕೆಯಾಗಬಹುದೆಂದು ಅಧ್ಯಯನ ವರದಿಯೊಂದರ ಅನಿಸಿಕೆಯೆನ್ನಲಾಗಿದೆ.

## ಅಕ್ಕಿ, ಗೋಧಿ ದರ ಇಳಿಕೆ ಸೂಚಕ

ಆಗಸ್ಟ್ 16, 2021 ರ ತನಕ ದೇಶೀ ಮಾರುಕಟ್ಟೆಯಲ್ಲಿ ಸಗಟು ಹಾಗೂ ಚಿಲ್ಲರೆ ಅಕ್ಕಿ, ಗೋಧಿ ಮಾರಾಟ ದರಗಳು ಇಳಿಕೆ ಸೂಚಕದಲ್ಲಿದೆ. ಅಕ್ಕಿದರ ಹಿಂದಿನ ತಿಂಗಳಿಗಿಂತ 1.78 ಶೇಕಡಾ ಇಳಿಕೆಯಾಗಿವೆಯೆಂದು ಸರಕಾರಿ ಮೂಲಗಳ ಅನಿಸಿಕೆ. ಅಕ್ಕಿ ಸಗಟು ದರ 2.17 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಗೋಧಿ ದರ 2.18 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ.

## ಎನ್.ಸಿ.ಡಿ.ಇ.ಎಕ್ಸ್ ನಲ್ಲಿ ಕಡ್ಲೆ ವಾಯಿದೆ ಮಾರಾಟ ರದ್ದು

ಮುಂದಿನ ಸೂಚನೆಯ ತನಕ SEBI, NCDEX ನಲ್ಲಿ ಕಡ್ಲೆ ವಾಯಿದೆ ಮಾರಾಟವನ್ನು ರದ್ದುಗೊಳಿಸಿದೆ. ಕಡ್ಲೆ ಉತ್ಪಾದನಾ ಅಂದಾಜಿಗಿಂತ ಸ್ವಲ್ಪ ಮಟ್ಟಿನ ಇಳಿಕೆಯಾಗಿದ್ದು, ಮಧ್ಯ ಪ್ರದೇಶದಲ್ಲಿ ಖರೀದಿ ದರ ಕನಿಷ್ಠ ಮಾರಾಟ ದರಕ್ಕಿಂತ ಕಡಿಮೆಯಿದೆಯೆನ್ನಲಾಗಿದೆ. ಮಾರಾಟ ದರಗಳು ಈಗ ಹೆಚ್ಚಳವಾಗಿದ್ದು ದರ ಹೆಚ್ಚಳದ ಸೂಚಕ ಕಾಣುತ್ತಿದೆ.